ದಿನಾಂಕಃ 04-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ** ದೂರುದಾರರ ಪರ ವಕೀಲರಿಂದ,

1) ನಾನು ಪಿಯುಸಿ ವ್ಯಾಸಂಗ ಮಾಡಿರುತ್ತೇನೆ. ನಾನು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಸಹಿ ಮಾಡುತ್ತೇನೆ. ನಿಶಾನೆ ಪಿ-01 ಚೆಕ್ಕು ನನ್ನ ಬ್ಯಾಂಕಿನ ಖಾತೆಗೆ ಸಂಬಂಧಿಸಿದ್ದಾಗಿರುತ್ತದೆ ಮತ್ತು ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ಸಾಕ್ಷಿಗೆ ಈ ಹಂತದಲ್ಲಿ ಒಂದು ಭಾವಚಿತ್ರವನ್ನು ತೋರಿಸಿ ಸದರಿ ಭಾವಚಿತ್ರವನ್ನು ಒಪ್ಪಿಕೊಂಡ ಕಾರಣ ಸದರಿ ದಾಖಲೆಯನ್ನು **ನಿಶಾನೆ.ಪಿ-6** ಎಂದು ಗುರುತಿಸಲಾಯಿತು.

2) ನನ್ನ ತಾಯಿಯ ಹೆಸರು ಗೌರಮ್ಮ. ನನ್ನ ತಾಯಿ ಧರ್ಮಸ್ಥಳ ಸಂಘದಲ್ಲಿ ಸಾಲವನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ವಿರುದ್ಧ ಒಟ್ಟು 4 ಚೆಕ್ಕು ಅಮಾನ್ಯ ಪ್ರಕರಣಗಳು ದಾಖಲು ಆಗಿರುತ್ತವೆ. ನನಗೆ ಸಿಸಿ ನಂ. 1/2022 ಪ್ರಕರಣದಲ್ಲಿ ಶಿಕ್ಷೆ ಆಗಿರುತ್ತದೆ ಎಂದರೆ ಸರಿ. ಸಿ ಟಿ ಪ್ರಕಾಶ ಎಂಬುವರು ಅಮಲ್ದಾರಿ ಪ್ರಕರಣ 2/2022 ಪ್ರಕರಣ ದಾಖಲು ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಸದರಿ ದಾಖಲೆಗಳನ್ನು ಒಪ್ಪಿಕೊಂಡ ಕಾರಣ ಸದರಿ ದಾಖಲೆಗಳನ್ನು **ನಿಶಾನೆ.ಪಿ-7 ಮತ್ತು 8** ಎಂದು ಗುರುತಿಸಲಾಯಿತು.

3) ದೂರುದಾರರು ನನ್ನ ವಿರುದ್ಧ ಅಸಲು ದಾವೆ ಸಂಖ್ಯೆ 67/2024 ದಾಖಲು ಮಾಡಿದ್ದರು ಎಂದರೆ ಸರಿ. ದೂರುದಾರರ ಪರವಾಗಿ ಒಂದು ಕರಾರು ಪತ್ರ ಬರೆದುಕೊಟ್ಟಿರುತ್ತೇವೆ ಎಂದರೆ ಸರಿ. ಸದರಿ ದಾವೆಯು ಹಿರಿಯರ ಸಮಕ್ಷಮ ರಾಜಿ

ಆಗಿದ್ದು, ಸದರಿ ರಾಜಿ ಪ್ರಕಾರ ನಾನು ದೂರುದಾರರಿಗೆ ರೂ.3,80,000/- ಕೊಡುತ್ತೇನೆ ಎಂದು ಹೇಳಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಕರಾರು ಪತ್ರದ ವಿಷಯವಾಗಿ ಗ್ರಾಮದಲ್ಲಿ ಪಂಚಾಯತಿ ಆಗಿರುತ್ತದೆ ಎಂದರೆ ಸರಿ. ಸದರಿ ಪಂಚಾಯತಿಯಲ್ಲಿ ಕುಚೇಲನಾಯಕ, ಅಣ್ಣಯ್ಯ ನಾಯಕ, ಮಾದೇನಾಯಕ ಹಾಗೂ ಇತರರು ಇದ್ದರು. ಸದರಿ ಪಂಚಾಯತಿಯಲ್ಲಿ ಹಣ ಕೊಡುವ ಬಗ್ಗೆ ಯಾವುದೇ ಮಾತುಕತೆ ಆಗಿರುವುದಿಲ್ಲ. ಪಂಚಾಯತಿದಾರರನ್ನು ವಿಚಾರಣೆ ಮಾಡಲು ತೊಂದರೆ ಇರುವುದಿಲ್ಲ. ನಾನು ರಾಜಿ ಪ್ರಕಾರ ದೂರುದಾರರಿಗೆ ರೂ. 3,80,000/- ಹಣವನ್ನು ಮರುಪಾವತಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

4) ನನ್ನ ತಾಯಿ ಮತ್ತು ದೂರು ದಾರರ ಪತ್ನಿ ಧರ್ಮಸ್ಥಳ ಸಂಘದಲ್ಲಿ ಸದಸ್ಯರಾಗಿದ್ದರು ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ನನ್ನ ತಾಯಿ ಧರ್ಮಸ್ಥಳ ಸಂಘದಲ್ಲಿ ರೂ. 1,00,000/- ಸಾಲವಾಗಿ ಪಡೆದುಕೊಂಡಿದ್ದರು ಎಂದರೆ ಸರಿಯಲ್ಲ. ಸದರಿ ಸಾಲಕ್ಕೆ ನಾನು ಜಾಮೀನುದಾರನಾಗಿರುತ್ತೇನೆ ಎಂದರೆ ಸರಿಯಲ್ಲ. ದಿನಾಂಕ 28.02.2022 ರಲ್ಲಿ ಮೂರು ವರ್ಷಗಳ ಒಳಗಾಗಿ ಹಣ ಮರುಪಾವತಿ ಮಾಡುತ್ತೇವೆ ಎಂದು ಒಪ್ಪಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಹಣವನ್ನು ಕಂತಿನ ರೂಪದಲ್ಲಿ ದೂರುದಾರರ ಖಾತೆಗೆ ವರ್ಗಾವಣೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಮತ್ತು ದೂರುದಾರರು ದೂರವಾಣಿ ಮೂಲಕ ಸಂಭಾಷಣೆ ಮಾಡಿರುತ್ತೇವೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲು ವಿಚಾರಣೆಗೆ ಕಾಲಾವಕಾಶ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ